# ಸೌದ್ ಶಕೀಲ್

## ಹೊಸ ದಾಖಲೆಯ ಅದೃಷ್ಟಶಾಲಿ ಸುಂದರ

**ಚುಟುಕು ಕ್ರಿಕೆಟ್‌ನ ಮಿಂಚುಹುಳುಗಳ ನಡುವೆ ಸೌದ್ ಶಕೀಲ್ ಎಂಬ ತಣ್ಣಗಿನ ಯುವಕ ಟೆಸ್ಟ್ ಕ್ರಿಕೆಟ್‌ನ ತಾರೆಯಾಗುವ ಲಕ್ಷಣ ತೋರಿದ್ದಾರೆ. ಆಡಲು ಶುರುಮಾಡಿದ ಎಂಟು ತಿಂಗಳಲ್ಲಿ ಸತತ ಏಳು ಟೆಸ್ಟ್‌ಗಳಲ್ಲಿ ಅರ್ಧಶತಕಗಳನ್ನು ಮೂಡಿಸಿದ ದಾಖಲೆ ಈಗ ಅವರ ಹೆಸರಲ್ಲಿದೆ.**

■ ರೂಪಾ ಡಿ.ಎ.


ಶ್ರೀಲಂಕಾ ಎದುರು ಮೊದಲ ಟೆಸ್ಟ್‌ನಲ್ಲಿ ದ್ವಿಶತಕ ಗಳಿಸಿದ ಕ್ಷಣದ ಸಂಭ್ರಮ

ರಿಯಾಸತ್ ಜುನಾಗಡ ಸಾಮ್ರಾಜ್ಯ ಗುಜರಾತ್‌ನಲ್ಲಿ ಇತ್ತು. ಮುಸ್ಲಿಂ ಬಾಬಿ ವಂಶಸ್ಥರು ಅದನ್ನು ಆಳುತ್ತಿದ್ದರು. ಈಗ ಅದು ಗುಜರಾತ್‌ನ ಒಂದು ಜಿಲ್ಲೆಯಾಗಿದೆ. ಅದರ ಭಾಗವಾಗಿದ್ದ ಮುಹಾಜಿರ್ ವಂಶಸ್ಥರು ಪಾಕಿಸ್ತಾನಕ್ಕೆ ವಲಸೆ ಹೋಗಿ, ಕರಾಚಿಯಲ್ಲಿ ನೆಲೆಗೊಂಡರು. ಆ ವಂಶದ ಕರುಳಿನ ಕುಡಿಯ ಹೆಸರು ಸೌದ್ ಶಕೀಲ್. ಅವರೀಗ ಪಾಕಿಸ್ತಾನ ಟೆಸ್ಟ್ ಕ್ರಿಕೆಟ್‌ನ ಸ್ಟಾರ್.

ಸೌದ್ ಶಕೀಲ್ ಎಂದರೆ ಅದೃಷ್ಟಶಾಲಿ ಸುಂದರ ಎಂದರ್ಥ. ಕಳೆದ ವರ್ಷ ಇಂಗ್ಲೆಂಡ್ ತಂಡದ ಎದುರು ಟೆಸ್ಟ್ ಆಡಲು ಸೌದ್ ಶಕೀಲ್ ಶುರುಮಾಡಿದ್ದು. ಅವರ ಆಟ ನೋಡಿದರೆ, ಹೆಸರಿನ ಅರ್ಥ ಅನ್ವರ್ಥದಂತೆ ಕಾಣುತ್ತದೆ. ಇದುವರೆಗೆ ಏಳು ಟೆಸ್ಟ್‌ಗಳಲ್ಲಿ ಕನಿಷ್ಠ ಒಂದು ಇನಿಂಗ್ಸ್‌ನಲ್ಲಿಯಾದರೂ ಅರ್ಧ ಶತಕವನ್ನು ಗಳಿಸುತ್ತಲೇ ಬಂದಿದ್ದಾರೆ ಶಕೀಲ್. 146 ವರ್ಷಗಳ ಇತಿಹಾಸದಲ್ಲಿ ಸತತ ಏಳು ಟೆಸ್ಟ್‌ಗಳಲ್ಲಿ ಅರ್ಧಶತಕ ದಾಖಲಿಸಿದ್ದು ಇದೇ ಮೊದಲು.

ಸೌದ್ ಶಕೀಲ್ ಎಡಗೈ ಬ್ಯಾಟ್ಸ್‌ಮನ್. ಸ್ಪಿನ್ನರ್ ಕೂಡ. ಆಸ್ಟ್ರೇಲಿಯಾದ ಮೈಕ್ ಹಸ್ಸಿ, ಪಾಕಿಸ್ತಾನದ ಸೈಯದ್ ಅನ್ವರ್ ಇವರ ನೆಚ್ಚಿನ ಆಟಗಾರರು.

ಶಕೀಲ್ ಅವರಿಗೀಗ 27 ವರ್ಷ. 2015ರಲ್ಲಿ ಅವರು ಪ್ರಥಮ ದರ್ಜೆ ಕ್ರಿಕೆಟ್‌ಗೆ ಕಾಲಿಟ್ಟದ್ದು. 'ಖೈದ್ ಎ ಆಜಂ ಟ್ರೋಫಿ' ಕ್ರಿಕೆಟ್‌ನಲ್ಲಿ ಕೈಪಳಗಿಸಿಕೊಂಡ ಅವರು, 2017ರಲ್ಲಿ ಪಾಕಿಸ್ತಾನ ಸೂಪರ್ ಲೀಗ್ ಕ್ರಿಕೆಟ್‌ನಲ್ಲಿ ಖ್ವೆಟ್ಟಾ ಗ್ಲ್ಯಾಡಿಯೇಟರ್ಸ್ ತಂಡಕ್ಕೆ ಆಯ್ಕೆಯಾದರು. 'ಖೈದ್ ಎ ಆಜಂ ಟ್ರೋಫಿ' ಕ್ರಿಕೆಟ್‌ನಲ್ಲಿ 2017–18ರ ಸಾಲಿನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್ ಎನಿಸಿಕೊಂಡರು. ಏಳು ಪಂದ್ಯಗಳಲ್ಲಿ 488 ರನ್‌ಗಳನ್ನು ಆಗ ಕಲೆಹಾಕಿದ್ದರು. 2019ರಲ್ಲಿ ಎಸಿಸಿ ಎಮರ್ಜಿಂಗ್ ಟೀಮ್ಸ್ ಏಷ್ಯಾಕಪ್ ಟೂರ್ನಿಯು ಬಾಂಗ್ಲಾದಲ್ಲಿ ನಡೆದಾಗ ಪಾಕಿಸ್ತಾನ ತಂಡದ ನಾಯಕರಾಗಿದ್ದರು.

2021ರಲ್ಲಿಯೇ ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್, ಜಿಂಬಾಬ್ವೆ ವಿರುದ್ಧದ ಟೆಸ್ಟ್ ಸರಣಿಯ ತಂಡಗಳಲ್ಲಿ ಅವರ ಹೆಸರಿತ್ತು. ಆದರೆ, ಆಡುವ ಅವಕಾಶ ಸಿಗಲಿಲ್ಲ. ಹೀಗಾಗಿ ಟೆಸ್ಟ್‌ಗಾಗಿ ಇನ್ನೂ ಒಂದು ವರ್ಷ ಕಾಯಬೇಕಾಗಿ ಬಂತು. ಅಲ್ಲಿಂದ 13 ಇನಿಂಗ್ಸ್‌ಗಳಲ್ಲಿ ಅವರ ಆಟ ನೋಡಲು ಸಿಕ್ಕಿದೆ. 37, 76, 63, 94, 23, 53, 22, ಔಟಾಗದೆ 55, ಔಟಾಗದೆ 125, 32, ಔಟಾಗದೆ 208, 30 ಹಾಗೂ 57 – ಇದು 13ಇನಿಂಗ್ಸ್‌ಗಳ ಅವರ ಸ್ಕೋರ್. ಎಲ್ಲಾ ಇನಿಂಗ್ಸ್‌ಗಳಲ್ಲೂ 20 ರನ್ ದಾಟಿರುವುದು ಅವರ ತಾಳ್ಮೆಯ ಕನ್ನಡಿ.

ಲಿಸ್ಟ್ ಎ ಹಾಗೂ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 40ಕ್ಕಿಂತ ಹೆಚ್ಚು ಸರಾಸರಿಯಲ್ಲಿ ರನ್‌ಗಳನ್ನು ಸೌದ್ ಶಕೀಲ್ ಕಲೆಹಾಕಿದ್ದಾರೆ. 2014ರಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ನಡೆದಾಗ ಪಾಕಿಸ್ತಾನ ತಂಡದ ಭಾಗವಾಗಿದ್ದ ಈ ಹುಡುಗ, ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ ಮೊದಲ 13 ಇನಿಂಗ್ಸ್‌ಗಳಿಂದ 87.5ರ ಸರಾಸರಿಯಲ್ಲಿ 875 ರನ್‌ಗಳನ್ನು ಗಳಿಸಿದ್ದಾರೆ. ಆರು ಅರ್ಧ ಶತಕಗಳು, ಒಂದು ಶತಕ, ಒಂದು ದ್ವಿಶತಕ ಇಷ್ಟು ಬೇಗ ಬಂದಿರುವುದು ಪಾಕಿಸ್ತಾನದ ಬ್ಯಾಟಿಂಗ್ ಕ್ರಮಾಂಕದ ಮಧ್ಯ ಭಾಗ ಸದೃಢಗೊಂಡಿರುವುದಕ್ಕೆ ಪುಷ್ಟಿ ಕೊಡುತ್ತದೆ. ಐದನೇ ಬ್ಯಾಟ್ಸ್‌ಮನ್ ಆಗಿ ಆಡುವ ಸೌದ್ ಶಕೀಲ್ ಅಡ್ಡ ಬ್ಯಾಟಿನಿಂದ ಹೊಡೆಯುವ, 'ಅಕ್ರಾಸ್' ಆಡಿ ಆಪತ್ತನ್ನು ಮೈಮೇಲೆ ಎಳೆದುಕೊಳ್ಳುವ ಜಾಯಮಾನದವರಲ್ಲ.

ಟ್ವೆಂಟಿ20 ಕ್ರಿಕೆಟ್‌ನ ಕಾಪಿಬುಕ್‌ಗೆ ಹೊರತಾದ ಶಾಟ್‌ಗಳನ್ನು ಹೊಡೆಯುವ ಹೊಸಕಾಲದ ಹುಡುಗರಿಗೆ ಅಪವಾದದಂತೆ ಸೌದ್ ಶಕೀಲ್ ಕಾಣುತ್ತಾರೆ. ಲಂಗರು ಹಾಕಿ ನಿಂತು, ಬ್ಯಾಕ್‌ಫುಟ್‌ನಲ್ಲಿ ಆಡುವ, ಆದಷ್ಟೂ ಚಿತ್ತಾಪಹಾರಿ ಸ್ಟ್ರೈಟ್ ಬ್ಯಾಟ್ ಶಾಟ್‌ಗಳನ್ನು ಹೊಡೆಯುವ ಉಮೇದು ತೋರುವ ಅವರಿಗೆ ಮುಂದೆ ಲಿಟ್ಮಸ್ ಟೆಸ್ಟ್ ಕಾದಿದೆ. ಇದೇ ವರ್ಷದ ಕೊನೆಗೆ ಆಸ್ಟ್ರೇಲಿಯಾದ ಪುಟಿದೇಳುವ ಪಿಚ್‌ಗಳಲ್ಲಿ ಅವರು ಬ್ಯಾಟಿಂಗ್ ಪರೀಕ್ಷೆಗೆ ಒಳಗಾಗಲಿದ್ದಾರೆ. ಅದಕ್ಕೆ ಬೇಕಾದ ಭೂಮಿಕೆಯನ್ನಂತೂ ಅವರೀಗ ಸಿದ್ಧ ಮಾಡಿಕೊಂಡಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in